# ಸೂಫಿ ಪ್ರೇಮಮಾರ್ಗ

ಸೂಫಿ ಮಾರ್ಗ ಉಳಿದಿರುವುದೇ ಉತ್ಕಟವಾದ ಪ್ರೇಮತತ್ತ್ವದ ಮೇಲೆ. ದ್ವೇಷ, ಹಿಂಸೆ, ಸಾಂಸ್ಥಿಕ ಧರ್ಮಗಳ ಮೇಲಾಟದಲ್ಲಿ ತನ್ನನ್ನು ತಾನೆ ವಿನಾಶದಂಚಿಗೆ ದೂಡಿಕೊಳ್ಳುತ್ತಿರುವ ಜಗತ್ತಿಗೆ ಪ್ರೇಮತತ್ತ್ವದ ಮೂಲಕ ಚೈತನ್ಯ ನೀಡುವುದೇ ಸೂಫಿ ಮಾರ್ಗ. ಯಾವ ಶಕ್ತಿಗೂ ಅಧೀನವಾಗಿಲ್ಲದಿರುವುದು; ಹಾಗೂ ಯಾವುದನ್ನೂ ಅಧೀನಕ್ಕೊಳಪಡಿಸಿಕೊಳ್ಳದೆ ಇರುವುದೇ ಸೂಫಿ ಪಂಥ. ಪ್ರಭುತ್ವ ಹಾಗೂ ಪುರೋಹಿತಶಾಹಿಗಳಿಂದ ಸಮಾನ ದೂರದಲ್ಲಿರುವ ಸೂಫಿಗಳು ಪ್ರೇಮತತ್ತ್ವವನ್ನು ಪ್ರಚುರಪಡಿಸಿದವರು. 'ಸೂರ್ಯನ ಅಡಿಯಲ್ಲಿ ಇರುವ ಮಸೀದಿಗಳೆಲ್ಲ ಗುಡಿಸಿ ಗುಂಡಾಂತರವಾದ ಮೇಲೆಯೇ ನಮ್ಮ ಪವಿತ್ರ ಕಾರ್ಯ ಆರಂಭವಾಗುವುದು' ಎಂದು ಒಬ್ಬ ಸೂಫಿ ಸಂತ ಹೇಳುತ್ತಾನೆ. 'ಸೂಫಿಗಳು ತಮ್ಮದು ಎಲ್ಲ ಧರ್ಮಗಳ ಜೀವರಸವೆಂದೂ, ಜಗತ್ತಿನ ಎಲ್ಲ ದ್ರಾಕ್ಷಿ ತೋಟಗಳ ಸಿಹಿರಸವೆಂದೂ ಹೇಳುತ್ತಾ ಬಂದಿದ್ದಾರೆ'.

ಕನ್ನಡದ ತತ್ತ್ವಸಾಧಕ ಸರ್ಪಭೂಷಣರು ಹೇಳುವಂತೆ 'ಶ್ರೀಗಿರಿಯು ಶರೀರದೊಳಗುಂಟು / ಓ ಶ್ರೀಗುರುಸಿದ್ಧ ಯೋಗಿಜನರಿಗೆ ಮರ್ಮವು ಬೇರುಂಟು' ಇದನ್ನೇ ರೂಮಿ 'ಮಸ್ನವಿ'ಯಲ್ಲಿ 'ಕಾಬಾದಲ್ಲಿ ಹುಡುಕಿದೆ, ಅಲ್ಲಿಲ್ಲ / ಯಾವ ದೇವಾಲಯದಲ್ಲೂ ಅವನಿಲ್ಲ / ಜ್ಞಾನಿಗಳ ಕಂಡೆ, ಅವರಲ್ಲಿ ಕೇಳಿದೆ / ತಾರ್ಕಿಕರು ಜಿನಗುಟ್ಟಿದರೂ ಅವನಿಲ್ಲ / ಭವ್ಯ ಆಸ್ಥಾನಗಳಲ್ಲಿ ಅರಸಿದೆ / ಅಲ್ಲೂ ಅವನಿಲ್ಲ / ಕಡೆಗೆ ನನ್ನ ಹೃದಯದೊಳಗೆ ಹೊಕ್ಕು ನೋಡಿದೆ / ಅರೆ, ಅವನಿಲ್ಲೇ ಇದ್ದಾನೆ' ವಚನಕಾರರು ಮತ್ತು ತತ್ತ್ವಸಾಧಕರಂತೆ, ಗುಡಿ ಗೋಪುರ, ಇಮಾರತಿನಂತಹ ಸ್ಥಾವರ ವಿರೋಧಿಯಾದ ಸೂಫಿ ಪಂಥವು ತನ್ನೊಳಗೆ ದೇವರನ್ನು ಕಾಣುವಷ್ಟು ಚೈತನ್ಯವುಳ್ಳದ್ದು.

ಸೂಫಿ ಗುರುವಿನ ಬಳಿಗೊಬ್ಬ ಪಂಡಿತ ಬಂದು ಕೇಳಿದ 'ಗುರುಗಳೆ ನಾನು ಸೂಫಿ ಚಿಂತನೆಯನ್ನು ತಿಳಿಯಲೆಂದು ನಿಮ್ಮಲ್ಲಿಗೆ ಬಂದಿದ್ದೇನೆ' ಎಂದ. ಗುರು ಹೇಳಿದ 'ಸೂಫಿ ಚಿಂತನೆಯನ್ನು ತಿಳಿದುಕೊಳ್ಳಲಾಗುವುದಿಲ್ಲ. ಸೂಫಿಯನ್ನು ಸೂಫಿ ಚಿಂತನೆಯ ಮೂಲಕ ತಿಳಿದುಕೊಳ್ಳಬಹುದು'. 'ಯಾವುದನ್ನು ತಿಳಿದುಕೊಳ್ಳಲಾಗುವುದಿಲ್ಲವೋ, ಅದನ್ನು ಚಿಂತನೆಯ ಮೂಲಕ ತಿಳಿದುಕೊಳ್ಳುವುದು ಹೇಗೆ?' ಎಂದು ಪಂಡಿತ ಮತ್ತೆ ಕೇಳಿದ. ಸೂಫಿ ಕೇಳಿದ 'ಪಂಡಿತರೆ ಬೆಳಕೆಲ್ಲಿದೆ?' ಪಂಡಿತ ಉದಾಸೀನದಿಂದ 'ನಮ್ಮ ಸುತ್ತ ಮುತ್ತಲೆಲ್ಲ ಬೆಳಕಿದೆ' ಎಂದು ಹೇಳಿದ. ಸೂಫಿ ಗುರು ನಕ್ಕು ಹೇಳಿದ 'ನಮ್ಮ ಸುತ್ತ ಮುತ್ತ ಇರುವುದು, ನಾವು ಕಾಣುತ್ತಿರುವುದು ಮರ, ಗಿಡ, ಪರ್ವತ ನದಿಗಳನ್ನು. ಆದರೆ ಬೆಳಕು ಕಾಣಿಸುತ್ತಿದೆಯೇ? ನಾವು ಬೆಳಕಿನ ಮೂಲಕ ಅದನ್ನೆಲ್ಲಾ ಕಾಣುತ್ತಿದ್ದೇವೆ' ಎಂದ. ಸೂಫಿ ಮುಂದುವರಿದು 'ಸೂಫಿ ಚಿಂತನೆ ಕಾಣುವುದಿಲ್ಲ, ಅದು ಉಳಿದವುಗಳನ್ನು ಕಾಣಿಸುತ್ತದೆ. ಬೆಳಕಿನ ಹಾಗೆ'. ಸೂಫಿ ಚಿಂತನೆಯೆನ್ನುವುದು ಹೀಗೆ.

ನವಾಬನೊಬ್ಬ ತನ್ನ ಆಮ್ರವನವನ್ನು ಕಾವಲು ಕಾಯಲು ಒಬ್ಬ ಬಾಲಕನನ್ನು ನೇಮಿಸಿಕೊಂಡ. ಮಾವಿನಹಣ್ಣಿನ ಕಾಲದಲ್ಲಿ ಒಂದು ದಿನ ನವಾಬ ತನ್ನ ಅಂತಃಪುರದ ರಾಣಿಯರೊಂದಿಗೆ ಆಮ್ರವನಕ್ಕೆ ಬಂದ. ಹಣ್ಣಾಗಿ ಜೋತುಬಿದ್ದಿದ್ದ ಮಾವಿನ ಹಣ್ಣುಗಳನ್ನು ನೋಡಿ ತಿನ್ನಬೇಕೆನಿಸಿತು! ಅಲ್ಲಿಯೇ ಇದ್ದ ಕಾವಲುಗಾರ ಬಾಲಕನನ್ನು ಕರೆದು 'ರುಚಿಯಾಗಿರುವ ಮಾವಿನಹಣ್ಣುಗಳನ್ನು ಆಯ್ದು ಕಿತ್ತು ತಾ' ಎಂದು ಆಜ್ಞಾಪಿಸಿದ. ಕಾವಲುಗಾರ ಬಾಲಕ ಹಣ್ಣುಗಳು ಜೋತಾಡುತ್ತಿದ್ದ ಮರಗಳಿಂದ ಕೆಲವು ಹಣ್ಣುಗಳನ್ನು ಕೊಯ್ದು ತಂದು, ಅವುಗಳನ್ನು ನವಾಬನಿಗೆ ನೀಡಿದ. ನವಾಬ ಹಣ್ಣನ್ನು ಕೊಯ್ದು ಒಂದು ಸೀಳನ್ನು ಬಾಯಿಗೆ ಹಾಕಿಕೊಂಡ! ಒಮ್ಮೆಲೆ ನವಾಬ ಮುಖ ಸಿಂಡರಿಸಿಕೊಂಡ. ಅವನು ತಿಂದ ಮಾವಿನ ಹಣ್ಣು ಹುಳಿಯಾಗಿತ್ತು! ಕೋಪಗೊಂಡ ನವಾಬ ಬಾಲಕನಿಗೆ 'ಬದ್ಮಾಷ್, ಸಿಹಿಯಾದ ಮಾವಿನಹಣ್ಣು ಕೊಡು ಎಂದರೆ, ಹುಳಿಯಿರುವ ಹಣ್ಣನ್ನು ಕೊಟ್ಟಿದ್ದಿಯಲ್ಲಾ' ಎಂದು ಕೋಪದಿಂದ ಬಾಲಕನ ಕಪಾಳಕ್ಕೆ ಬಾರಿಸಿದ. ನವಾಬ ಹೊಡೆದ ಹೊಡೆತಕ್ಕೆ ಬಾಲಕನ ಕೆನ್ನೆಮೇಲೆ ಬೆರಳುಗಳು ಕೆಂಪಗೆ ಮೂಡಿದವು. ಅವನ ಕಣ್ಣುಗಳಲ್ಲಿ ನೀರು ಹರಿಯಿತು. ದುಃಖವನ್ನು ಸಾವರಿಸಿಕೊಂಡ ಬಾಲಕ 'ಕ್ಷಮಿಸಿ ಒಡೆಯರೆ, ನೀವು ನನಗೆ ತೋಟವನ್ನು ಕಾಯಲು ಮಾತ್ರ ಹೇಳಿದಿರಷ್ಟೆ, ಹಣ್ಣಿನ ರುಚಿ ನೋಡಲು ಹೇಳಿರಲಿಲ್ಲ! ಆದ್ದರಿಂದ ನನಗೆ ಇಲ್ಲಿನ ಯಾವ ಹಣ್ಣಿನ ರುಚಿಯೂ ಗೊತ್ತಿಲ್ಲ! ತೋಟ ಕಾಯುವುದಷ್ಟೇ ನನ್ನ ಕೆಲಸವಾಗಿತ್ತು' ಎಂದು ನಮ್ರವಾಗಿ ಹೇಳಿದ. ಮುಂದೆ ಅದೇ ಬಾಲಕ ಸೂಫಿ ಸಂತನಾದ.

ತರ್ಕದ ಗೋಜಲೇ ಇಲ್ಲದ ಈ ಕತೆ ಎಂತಹವರನ್ನೂ ಕರಗಿಸುತ್ತದೆ. 'ತುಟಿ ಹೊಲಿದುಕೊಂಡಾಗ; ಹೃದಯದಿಂದ ಸಾವಿರ ನಾಲಗೆಗಳು ಚಿಮ್ಮುತ್ತವೆ'. ಈ ರೂಪಕದ ಕಥನವು ಸೂಫಿ ಪಂಥದ ದರ್ಶನವಾಗಿ, ವಸಂತವನ್ನು ವಸಂತವು ಎದುರುಗೊಳ್ಳುವಂತೆ ತನ್ನೊಳಗಿನ ಪ್ರೇಮತತ್ತ್ವದಿಂದ ಹೂ ಅರಳಿಸುತ್ತದೆ. ಬುದ್ಧ, ಯೇಸು, ಸೂಫಿ ಪ್ರೇಮಮಾರ್ಗದ ಪಥಿಕರು ಬಿತ್ತಿದ ಪ್ರೇಮದ ಬೀಜಗಳು ಭೂಮಿಯ ಮೇಲೆ ಹರಿಯುವ ಎಲ್ಲ ನದಿಗಳನ್ನೂ ಸಿಹಿಯಾಗಿ ಇಟ್ಟಿವೆ. ಮಿಂಚು ಹೊಳೆಯಿಸುವ ಇಂತಹ ರೂಪಕಗಳು ಸೂಫಿ ಮಾರ್ಗದಲ್ಲಿ ಇಟ್ಟಿರುವ ಅರವಟ್ಟಿಗೆಗಳಂತೆ.

ಒಂಬತ್ತನೇ ಶತಮಾನದ ಸೂಫಿ ರಬೀಯಾ ಅಲ್–ಬಸ್ರಿ ಎನ್ನುವ ಮಹಿಳೆಯನ್ನು ಯಾರೋ ಹೀಗೆ ಕೇಳಿದರಂತೆ 'ನೀನು ದೇವರನ್ನು ಪ್ರೀತಿಸುವೆಯಾ?' ರಬೀಯಾ ಹೇಳಿದಳು 'ಹೌದು ಪ್ರೀತಿಸುತ್ತೇನೆ. 'ಹಾಗಾದರೆ ಸೈತಾನನ್ನು ದ್ವೇಷಿಸುತ್ತಿಯಾ?' ಎಂದು ಕೇಳಿದ. ರಬೀಯಾ 'ನನ್ನ ಹೃದಯದಲ್ಲಿ ದೈವೀ ಪ್ರೇಮ ಎಷ್ಟೊಂದು ತುಂಬಿದೆ ಎಂದರೆ, ಸೈತಾನನ್ನು ದ್ವೇಷಿಸಲು ಅಲ್ಲಿ ಎಡೆಯೇ ಇಲ್ಲ' ಎಂದಳು. ದೇವರು ಇರುವ ಹೃದಯದಲ್ಲಿ ಸೈತಾನ ಇರುವುದಿಲ್ಲ. ದೇವರನ್ನು ಆರಾಧಿಸುವವರ ಹೃದಯದಲ್ಲಿ ಪ್ರೇಮದ ಸೊಲ್ಲುಗಳು ಇರುತ್ತವೆಯೇ ಹೊರತು, ಇರಿಯುವ ಖಡ್ಗ ಇರುವುದಿಲ್ಲ! ದ್ವೇಷ, ನಂಜು, ಪ್ರತೀಕಾರದ ನೆರಳಿಗೆ ಬದಲಾಗಿ ವಸಂತದ ಚಿಗುರು ಇರುತ್ತದೆ. ಇದನ್ನೇ 'ದೈವೀ ಪ್ರೇಮ' ಎಂದು ರಬೀಯಾ ಕರೆದಳು. ಧರ್ಮದ ಅಮಲಿನಲ್ಲಿರುವವರ ಕಣ್ಣು ತಮಂಧದ ಆಚೆಗೆ ಬಂದು ಸ್ವಚ್ಛ ಬೆಳಕನ್ನು ಕಾಣುವಂತೆ ಮಾಡುವ ಹೊಣೆಯು ಸೂಫಿ ಪಂಥದ್ದಾಗಿದೆ.

ಬೌದ್ಧಿಕ ಡೌಲು, ಯಶಸ್ಸು, ಸಿದ್ಧಿಗಳೆಲ್ಲ ಕಾಮನಬಿಲ್ಲಿನಂತೆ ಕ್ಷಣಿಕ! ಬಲವಾದ ಬಿಸಿಲಿಗೆ ಅವು ಕರಗುತ್ತವೆ. ಅರಿವಿನ ಬೆಳಕನ್ನು ಕಾಣಲು ಗುರುಕರುಣೆಯೇ ಬಟ್ಟೆ. ಆದ್ದರಿಂದಲೇ ಮಸ್ನವಿ ಹೇಳುತ್ತದೆ 'ವಸಂತ ಬರದೆ ಮೊಗ್ಗುಗಳು ಅರಳುವುದಿಲ್ಲ'!

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಮುಚ್ಚುಮರೆ ಇಲ್ಲದೆಯೇ, ನಿನ್ನ ಮುಂದೆಲ್ಲವನು, ಬಿಚ್ಚಿಡುವೇ ಓ ಗುರುವೇ ಅಂತರಾತ್ಮ.

  —ಕುವೆಂಪು

- ತಿಳಿದವರೊಂದಿಗೆ ಅರ್ಧ ಗಂಟೆ ಕಳೆದರೆ ನಾಲ್ಕು ಪುಸ್ತಕಗಳನ್ನು ಓದಿದಂತೆ. ಯೋಗಿಗಳೊಂದಿಗೆ ಅರ್ಧ ಗಂಟೆ ಕಳೆದರೆ ಅರ್ಧ ಬದುಕನ್ನೇ ದಾಟಿದಂತೆ.

  —ಸಿದ್ದೇಶ್ವರ ಸ್ವಾಮೀಜಿ

- ನೀನು ಯೋಚನೆ ಮಾಡದೇ ಹೇಳುವ ಒಂದೊಂದು ಮಾತು, ನಿನ್ನನ್ನು ಒಂದೊಂದು ನಿಮಿಷವೂ ಯೋಚನೆ ಮಾಡಿಸುತ್ತೆ.

  —ಸ್ವಾಮಿ ವಿವೇಕಾನಂದ

- ನಿನ್ನೊಳಗೆ ನೀ ಹೊಕ್ಕು, ನಿನ್ನ ನೀನೇ ಕಂಡು ನೀನು ನೀನಾಗು ಗೆಳೆಯ.

  —ದ.ರಾ. ಬೇಂದ್ರೆ

- ಯಾರಿಗೂ ಉಪದೇಶ ಮಾಡಬೇಡಿ. ನೀವೇನು ಹೇಳಬೇಕಂತಿದ್ದೀರೋ ಹಾಗೆ ಬದುಕಿ ತೋರಿಸಿ.

  —ಶಿವರಾಮ ಕಾರಂತ

- ನಮ್ಮ ಮಾತಿಗೆ ಅರ್ಥ ಬರಬೇಕಾದರೆ ಮಾತನಾಡುವಷ್ಟೇ ಮಾತನಾಡದೆ ಇರುವುದೂ ಅಗತ್ಯ.

  —ಪೂರ್ಣಚಂದ್ರ ತೇಜಸ್ವಿ

- ನಗುತ್ತಿರು ನೋವು ಹೊಸದಲ್ಲ.

  —ಚಾರ್ಲಿ ಚಾಪ್ಲಿನ್